**ದಿನಾಂಕ 25-11-2020ರಂದು ಬುಧವರ ಬೆಳಗ್ಗೆ 11:00 ಘಂಟೆಗೆ ತಲಕಾವೇರಿ ಬಡಾವಣೆಯ ಉಮಾಮಹೇಶ್ವರಿ ಭವನದಲ್ಲಿ ವಾರ್ಡ್ ಸಂಖ್ಯೆ:87ರ, ಶ್ರೀ.ವಿಜಯ ಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ.ಹೆಚ್.ಚಂದ್ರಪ್ಪ (ಸಹಾಯಕ ಅಭಿಯಂತರರು) |
| 2. | ಶ್ರೀ. ರಾಘವೇಂದ್ರ ಕೆ.ವಿ, ಹಿರಿಯ ಆರೋಗ್ಯ ಪರಿವೀಕ್ಷಕರು |
| 3. | ಶ್ರೀ.ರಂಗನ್ನಾಥ.ಎನ್ ಕಿರಿಯ ಆರೋಗ್ಯ ನಿರಿಕ್ಷಕರು |
| 4. | ಶ್ರೀ.ಸಂಜಯ್.ಎಸ್ (ಸ.ಅ, ವಿದ್ಯುತ್ ವಿಭಾಗ) |
| 5. | ಕೃಷ್ಣಪ್ಪ (ಕಂಟ್ರಾಕ್ಟರ್) |
| 6. | ಮಹೇಶ್ |
| 7. | ವಿ.ನಾಗರಾಜ ರೆಡ್ಡಿ |
| 8. | ಎಂ.ಎಸ್.ಬಾಲ ಸುಬ್ರಮಣ್ಯ |
| 9. | ಪಿ.ಸುರೇಂದ್ರನ್ |
| 10. | ನಿವಾಸಿ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಸಾರ್ವಜನಿಕರು |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೆರ್ ಆಸೋಸಿಯೆಷನ್‌ನ ಅಧ್ಯಕ್ಷರುಗಳು, ಪ್ರತಿನಿದಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

<u>ಕೋವಿಡ್-19 ಮಹಾಮಾರಿ ರೋಗ</u>

ಪ್ರಪಂಚದಾದ್ಯಂತ ಕೋವಿಡ್-19 ಮಹಾಮಾರಿ ರೋಗವು ಹರುಡುತ್ತಿರುವುದು ಗಮನಾರ್ಹವಾಗಿ ಕಡಿಮೆಯಾಗಿರುವದನ್ನು ಸಭೆಯ ಗಮನಕ್ಕೆ ತರುತ್ತಾ ಯಾವುದೇ ಕಾರಣಕ್ಕೂ ಸಾರ್ವಜನಿಕ ಪ್ರದೇಶಗಳಲ್ಲಿ ಮುಖ ಗವಸು ಇಲ್ಲದೇ ಅಂತರ ಕಾಯ್ದುಕೊಳ್ಳದೇ ಇರಬಾರದೆಂದು ಕಾಲಕಾಲಕ್ಕೆ ಸ್ಯಾನಿಟೈಸರ್ಸ್‌ಗಳನ್ನು ಉಪಯೋಗಿಸಿಕೊಂಡು ಮಹಾಮಾರಿ



Scanned with CamScanner

ರೋಗದಿಂದ ದೂರವಿರಲು ಕೋರಲಾಯಿತು ಹಾಗೂ ಸ್ಥಳೀಯ ನಿವಾಸಿ ಕ್ಷೇಮಾಭಿವೃದ್ಧಿ ಸಂಘಗಳು ಈ ದಿಸೆಯಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ಉಂಟು ಮಾಡುವಂತೆ ಕೋರಲಾಯಿತು.

ಕ್ರಮ:ಹಿರಿಯ ಆರೋಗ್ಯ ನಿರೀಕ್ಷಕರು

ಶ್ರೀ. ಎಂ.ಎಸ್.ಬಾಲ ಸುಬ್ರಮಣ್ಯ ರವರು ಮಾತನಾಡಿ ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಅನ್ನಸಂದ್ರ ಪಾಳ್ಯದ ರಸ್ತೆಯಲ್ಲಿ ಕಸದ ಸಮಸ್ಯೆ ತೀವ್ರವಾಗಿದ್ದು ಎಲ್ಲ ಕಡೆಯು ಸಾರ್ವಜನಿಕರು ಕಸವನ್ನು ಎಸೆಯುತ್ತಿದ್ದು, ದುರ್ವಾಸನೆ ಬಿರುತ್ತಿದ್ದು, ಓಡಾಡಲು ತುಂಬಾ ತೊಂದರೆಯಾಗುತ್ತಿದೆ ಎಂದು ತಿಳಿಸಿದರು.

ಯಲ್ಲಮ್ಮ ದೇವಸ್ಥಾನದ ಬಳಿ, ರಾಮ ಟೆಂಪಲ್ ಬಳಿ ರಾಜುಕಾಲುವೆಗೆ ಕಸ ಮತ್ತು ಇತರ ಸಾಮಗ್ರಿಗಳನ್ನು ಹಾಕುತ್ತಿದ್ದು ಇದನ್ನು ತಡೆಗಟ್ಟಲು ಪೆನ್ಸಿಂಗ್ ನಿರ್ಮಾಣ ಮಾಡಲು ಕೊರಿರುತ್ತಾರೆ. ಈ ಬಗ್ಗೆ ಬೃಹತ್ ನೀರುಗಾಲುವೆ ಅಭಿಯಂತರಿಗೆ ಸ್ಥಳ ತನಿಖೆ ನಡೆಸಿ ಸೂಕ್ತ ಕ್ರಮ ವಹಿಸಲು ಸೂಚಿಸಲಾಯಿತು.

ಕ್ರಮ:ಹಿರಿಯ ಆರೋಗ್ಯ ನಿರೀಕ್ಷಕರು ಮತ್ತು
ರಾಜುಕಾಲುವೆ ಅಭಿಯಂತರರು

ಶ್ರೀ.ನಾಗರಾಜ ರೆಡ್ಡಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ಮುಖ್ಯ ರಸೆಯಲ್ಲಿ ತಳ್ಳು ಗಾಡಿಯವರು ರಸ್ತೆ ಮತ್ತು ಪುಟ್‌ಪಾತ್‌ನಲ್ಲಿ ನಿಲ್ಲಿಸಿ ವ್ಯಾಪಾರ ಮಾಡುತ್ತಿರುವ ಕಾರಣ ಟ್ರಾಫಿಕ್ ಸಮಸ್ಯೆಯಾಗುತ್ತಿರುವುದನ್ನು ಸಭೆಯ ಗಮನಕ್ಕೆ ತಂದು ಪುಟ್‌ಪಾತ್ ತೆರವುಗೊಳಿಸಲು ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು ಮತ್ತು
ಟ್ರಾಫಿಕ್ ಪೋಲಿಸ್

ಶ್ರೀ.ಸ್ವಸ್ತಿಕ್ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ವಿವಿದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು ತುರ್ತಾಗಿ ಪೂರ್ಣಗೊಳಿಸಿಕೊಡುವಂತೆ ಕೋರಿದರು.ಅನ್ನಸಂದ್ರ ಪಾಳ್ಯದ ಮುಖ್ಯ ರಸ್ತೆಯಲ್ಲಿ ಕಾಮಗಾರಿಯು ಪ್ರಗತಿಯಲ್ಲಿದ್ದು ಶೀಘ್ರ ಪೂರ್ಣಗೊಳಿಸಲು ಕೋರಲಾಯಿತು.

ಕ್ರಮ;ಕಾರ್ಯಪಾಲಕ ಅಭಿಯಂತರರು (ರ.ಮೂ.ಸೌ.ವಿಭಾಗ)

ಪಿ.ಸುರೇಂದ್ರನ್ನ ರವರು ಮಾತನಾಡಿ ಎಲ್ಲಮ್ಮ ದೇವಸ್ಥಾನದ ರಸ್ತೆ, ನಲ್ಲೂರುಪುರಂನಲ್ಲಿರುವ ರಾಜಕಾಲುವೆಯಲ್ಲಿ ಹೂಳು ತೆಗಿಸಿಕೊಡುವಂತೆ ಕೋರಿದರು.

ಸಾರ್ವಜನಿಕರ ಅನುಕೂಲತೆಗಾಗಿ ಈಗಾಗಲೇ ಕೆಲವು ಕಡೆ ಸಿ.ಸಿ ಕ್ಯಾಮರಗಳನ್ನು ಅಳವಡಿಸಿದ್ದು ಇನ್ನು ಕೆಲವು ಭಾಗಗಳಲ್ಲಿ ಸಿ.ಸಿ.ಕ್ಯಾಮರಗಳನ್ನು ಅಳವಡಿಸುವಂತೆ ಕೋರಿದರು.

ಕ್ರಮ:ಸಹಾಯಕ ಅಭಿಯಂತರರು ವಿದ್ಯುತ್ ವಿಭಾಗ, ವಾರ್ಡ್
ಅಭಿಯಂತರರು ಮತ್ತು ರಾಜಕಾಲುವೆ ವಿಭಾಗ

ಟ್ರಾಫಿಕ್ ಪೋಲಿಸ್‌ಗೆ ಈ ಹಿಂದಿನ ಸಬೆಗೆ ಹಾಜರಗದೆ ಇರುವುದನ್ನು ತಿಳಿಸಿ ಪತ್ರ ಬರೆದು ಮುಂದಿನ ಸಬೆಗೆ ಹಾಜರಾಗಲು ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು



Scanned with CamScanner

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಿರಿಯ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.87 ಹೆಚ್.ಎ.ಎಲ್ ಏರ್‌ಪೋರ್ಟ್

ವಾರ್ಡ್ ಸಮಿತಿ ಅಧ್ಯಕ್ಷಕರು ಹಾಗೂ
ನೋಡೆಲ್ ಅಧಿಕಾರಿಗಳು

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ತೋಟಗಾರಿಕೆ ಅಧೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು–11.
7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
8. ಆರೋಗ್ಯ ಅಧಿಕಾರಿಗಳು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
9. ಸಹಾಯಕ ನಿದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
11. ಟ್ರಾಫೀಕ್/ಸಿವಿಲ್ ಪೋಲಿಸ್, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೇರ್ ಆಸೋಸಿಯೇಷನ್ಸ, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ ಗಳು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್.



Scanned with CamScanner